ಅಸಲು ದಾವಾ ಸಂಖ್ಯೆ583/2019

**ಪಿ.ಡಬ್ಲ್ಯು:1**

**<u>1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕಡೂರು.</u>**

**ದಿನಾಂಕ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**<u>ಪಾಟೀಸವಾಲು : ಶ್ರೀಮತಿ. ಬಿ.ಆರ್.ಆರ್. ಪ್ರತಿವಾದಿ ಪರ ವಕೀಲರಿಂದ</u>**

ನನ್ನ ತಂದೆಯ ಹೆಸರು ಮಲ್ಲಪ್ಪ. ಮಲ್ಲಪ್ಪರರಿಗೆ 4 ಜನ ಮಕ್ಕಳು. ಅವರೆಂದರೆ ಮಹೇಶ್ವರಪ್ಪ, ಕುಮಾರಸ್ವಾಮಿ, ಪುಟ್ಟಪ್ಪ ಮತ್ತು ಜಯಣ್ಣ. ಈ ದಾವೆಯನ್ನು ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೇಳಿ ಸಲ್ಲಿಸಿರುತ್ತೇನೆ. ದಾವೆ ಸಲ್ಲಿಸಲು ನನ್ನ ವಕೀಲರಿಗೆ ತಿಳಿದಿರುವಷ್ಟು ಮಾಹಿತಿ ನೀಡಿದ್ದೇನೆ. 1994 ರಂದು ನನ್ನ ಹಾಗೂ ಮಹೇಶ್ವರಪ್ಪ, ಕುಮಾರಸ್ವಾಮಿ ಮತ್ತು ಜಯಣ್ಣ ರವರ ನಡುವೆ ವಿಭಾಗವಾಗಿದೆ. ಸದರಿ ವಿಭಾಗವು ಊರಿನ ಹಿರಿಯರ ಸಮಕ್ಷಮ ಆಗಿರುತ್ತದೆ. ಸದರಿ ವಿಭಾಗದಲ್ಲಿ ನನ್ನ ತಂದೆಯ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ಗುಬ್ಬಿಹಳ್ಳಿ ಗ್ರಾಮದ ಸ.ನಂ.87, ಸ.ನಂ.107, ಸ.ನಂ.109 ಮತ್ತು ಸ.ನಂ.101 ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದೇನೆ. ವಿಭಾಗವನ್ನು ಪತ್ರದಲ್ಲಿ ಬರವಣಿಗೆ ಮಾಡಿ, ಗ್ರಾಮ ಲೆಕ್ಕಾಧಿಕಾರಿಯವರಿಗೆ ಖಾತೆ ಮಾಡಲು ನೀಡಿದ್ದೆವು. ಎಮ್.ಆರ್. 5/1996-97 ಮತ್ತು ಎಮ್.ಆರ್. 8/1996/97 ರಂತೆ ಖಾತೆಯಾಗಿದೆ ಎಂದರೆ ಸರಿ. ಎಮ್.ಆರ್. 5/1996-97 ಮತ್ತು ಎಮ್.ಆರ್. 8/1996/97 ರಂತೆ ಪಹಣಿಯಲ್ಲಿರುವ ವಿಸ್ತೀರ್ಣದಲ್ಲಿ ನಾವು ಸ್ವಾಧೀನ ಹೊಂದಿದ್ದೇವೆ ಎಂದರೆ ಸರಿ.

ದಾವಾ ಸ.ನಂ.31/1 ಎ, ಈ ಸ್ವತ್ತು ನನ್ನ ತಾಯಿಗೆ ಸೇರಿದ್ದು. ಸದರಿ ಸ್ವತ್ತನ್ನು ನನ್ನ ತಾಯಿಗೆ ಅವರ ತಾಯಿ ನೀಡಿದ್ದಾರೆ. ನನ್ನ ತಾಯಿ ದಾವಾ ಸ್ವತ್ತನ್ನು ನನ್ನ ಅಜ್ಜಿಯಿಂದ ಖರೀದಿಸಿರುವುದಾಗಿ

ನನ್ನ ವಾದಪತ್ರದಲ್ಲಿ ತಿಳಿಸಿದ್ದೇನೆ. ನನ್ನ ವಾದಪತ್ರದಲ್ಲಿ ಎಲ್ಲಿಯೂ ಸಹ ನನ್ನ ತಾಯಿ ದಾವಾ ಸ್ವತ್ತನ್ನು ನನ್ನ ಅಜ್ಜಿಯಿಂದ ಖರೀದಿಸಿರುವುದಾಗಿ ತಿಳಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಯು ದಾವಾ ಸ್ವತ್ತನ್ನು ದಿಃ27.02.2013 ರಂದು ಪ್ರತಿವಾದಿಗೆ ನೋಂದಾಯಿತ ದಾನಪತ್ರದ ಮೂಲಕ ನೀಡಿದ್ದಾರೆ ಎಂದರೆ ಸರಿ. ನನ್ನ ತಾಯಿ ಮೃತರಾಗುವವರೆಗೆ ಪ್ರತಿವಾದಿಯ ಜೊತೆ ಇದ್ದರು ಎಂದರೆ ಸರಿ. ನಿಪಿ-8 ರಂತೆ ಪತ್ರವನ್ನು ಯಾವ ದಿನಾಂಕ ಬರೆದಿದ್ದಾರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಯಾವ ಆಸ್ತಿಗಳ ಬಗ್ಗೆ ಬರೆದಿದ್ದಾರೆ ನನಗೆ ಗೊತ್ತಿಲ್ಲ. ಸ.ನಂ.107 ಮತ್ತು ಸ.ನಂ.109 ಸ್ವತ್ತುಗಳು ನನಗೆ ವಿಭಾಗದ ಮೂಲಕ ಬಂದಿವೆ ಎಂದು ನುಡಿದಿದ್ದು, ಸದರಿ ವಿಭಾಗ ಪತ್ರವನ್ನು 1994 ರಲ್ಲಿ ಬರೆಯಲಾಯಿತು ಎಂದು ನುಡಿಯುತ್ತಾರೆ. ಸದರಿ 1994 ರ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಹಕ್ಕಿಲ್ಲದೇ ಇರುವ ಕಾರಣ ಹಾಗೂ ನಮ್ಮ ಕುಟುಂಬಕ್ಕೆ ಸೇರಿಲ್ಲದೆ ಇರುವ ಕಾರಣ ಸದರಿ ಸ್ವತ್ತನ್ನು ವಿಭಾಗ ಪತ್ರದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿಯು ಸದರಿ ಸ್ವತ್ತನ್ನು ನನ್ನ ತಾಯಿಗೆ ಜೀವನಾಂಶಕ್ಕೆ ಬಿಟ್ಟಿದ್ದು, ಹಾಗಾಗಿ ಸದರಿ ಸ್ವತ್ತನ್ನು ವಿಭಾಗದಲ್ಲಿ ಸೇರ್ಪಡಿಸಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ನಾವೆಲ್ಲ ಅಣ್ಣ-ತಮ್ಮಂದಿರು ಸೇರಿ ದಾವಾ ಸ್ವತ್ತನ್ನು ನನ್ನ ತಾಯಿಯ ಜೀವನಾಂಶಕ್ಕೆ ಬಿಟ್ಟಿದ್ದೆವು ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ ನನಗೆ ಮತ್ತು ನನ್ನ ಸಹೋದರರಿಗೆ ಯಾವುದೆ ಹಕ್ಕಿರಲ್ಲಿ ಮತ್ತು ಸದರಿ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತಾಗಿತ್ತು ಎಂದರೆ ಸಾಕ್ಷಿಯು ನಾವೆಲ್ಲರೂ ಸೇರಿ ನನ್ನ ತಾಯಿಯ ಹೆಸರಿಗೆ ದಾವಾ ಸ್ವತ್ತನ್ನು ಖರೀದಿಸಿದ್ದೆವು ಎಂದು ನುಡಿಯುತ್ತಾರೆ. ಗಂಗಮ್ಮನಿಂದ ನನ್ನ ತಾಯಿಗೆ

ಆಗಿರುವ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಎಷ್ಟು ಹಣಕ್ಕೆ ಸದರಿ ಸ್ವತ್ತನ್ನು ಖರೀದಿಸಲಾಗಿತ್ತು ನೆನಪಿಲ್ಲ. ಯಾವ ವರ್ಷದಲ್ಲಿ ಕ್ರಯಪತ್ರವಾಗಿದೆ ಎಂದು ಗೊತ್ತಿಲ್ಲ.

ನನಗೆ ಈಗ 65 ವರ್ಷ ವಯಸ್ಸಾಗಿದೆ. ನನ್ನ ತಾಯಿ ರುದ್ರಮ್ಮ ಗಂಗಮ್ಮರವರಿಂದ ಕ್ರಯ ಪಡೆದಾಗ ಕ್ರಯಪತ್ರದಲ್ಲಿ ನಾವೆಲ್ಲರು ಸೇರಿ ಹಣ ಹಾಕಿದ್ದೇವೆ ಎಂದು ನಮೂದಿಸಿರುವುದಿಲ್ಲ. 1960 ರಲ್ಲಿ ನಾನು ಜನಿಸಿದ್ದೇನೆ. ನಾನು 1995 ರಲ್ಲಿ ವಿವಾಹವಾಗಿದ್ದೇನೆ. ನಾನು 18 ವರ್ಷ ವಯಸ್ಸಿನಿಂದ ದುಡಿಮೆ ಮಾಡಲು ಪ್ರಾರಂಭಿಸಿದೆ. ನಾನು ವ್ಯವಸಾಯ ಮಾಡುತ್ತಿದ್ದೆ. ನನ್ನ ವಿವಾಹ ನಂತರ ನಾನು ಮತ್ತು ನನ್ನ ಕುಟುಂಬ ಪ್ರತ್ಯೇಕವಾಗಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಎಲ್ಲರು ಒಟ್ಟಿಗೆ ಇದ್ದೆವು ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

**Sd/-05.06.26**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.